**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ 05 ಇಎಪಿ 2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
ದಿನಾಂಕ: 06.04.2024

**ಸುತ್ತೋಲೆ**

ವಿಷಯ: 2024 ರ ಮೇ ತಿಂಗಳಲ್ಲಿ ಜರುಗುವ ಸಿ-03, ಸಿ-09, ಸಿ-15 ಮತ್ತು ಸಿ-20 ಪಠ್ಯಕ್ರಮಗಳ ಡಿಪ್ಲೋಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಗಳನ್ನು ಪ್ರಕಟಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024 ರ ಮೇ ತಿಂಗಳಲ್ಲಿ ಜರುಗುವ ಸಿ-03, ಸಿ-09, ಸಿ-15 ಮತ್ತು ಸಿ-20 ಪಠ್ಯಕ್ರಮಗಳ ಡಿಪ್ಲೋಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು (Provisional Time Table) ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಸಿ-03, ಸಿ-09, ಸಿ-15 ಮತ್ತು ಸಿ-20 ಪಠ್ಯಕ್ರಮಗಳ ತಾತ್ಕಾಲಿಕ ವೇಳಾಪಟ್ಟಿಗಳನ್ನು ಆಯಾ ಪಾಲಿಟೆಕ್ನಿಕ್‌ನ ಪ್ರಾಚಾರ್ಯರು ಪ್ರತ್ಯೇಕವಾಗಿ ಹಾಗೂ ವಿಭಾಗವಾರು ವಿದ್ಯಾರ್ಥಿ ಸೂಚನಾ ಫಲಕದಲ್ಲಿ ಪ್ರಕಟಿಸಬೇಕೆಂದು ತಿಳಿಸಲಾಗಿದೆ.

ಒಂದು ವೇಳೆ ಯಾವುದೇ ವಿದ್ಯಾರ್ಥಿಗೆ ಒಂದೇ ಸಮಯದಲ್ಲಿ ಎರಡು ವಿಷಯಗಳು ಕಂಡುಬಂದಲ್ಲಿ/ಯಾವುದೇ ಸಲಹೆಗಳಿದ್ದಲ್ಲಿ ಸಂಬಂಧಪಟ್ಟ ಪ್ರಿನ್ಸಿಪಾಲರು ಕೂಡಲೇ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ ಇವರ ಗಮನಕ್ಕೆ ತರಲು ಸೂಚಿಸಲಾಗಿದೆ. ಹಾಗೂ ಈ ಕುರಿತು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ Message ಕಳುಹಿಸಲು ತಿಳಿಸಲಾಗಿದೆ.

**ವಿಶೇಷ ಸೂಚನೆ:** ಸಿ-03, ಸಿ-09 ಮತ್ತು ಸಿ-15 ಪಠ್ಯಕ್ರಮದ ಥಿಯರಿ ಪರೀಕ್ಷೆಗಳನ್ನು ಆಯ್ದ ಸರ್ಕಾರಿ ಪಾಲಿಟೆಕ್ನಿಕ್ ಗಳಲ್ಲಿ ಮಾತ್ರ ನಡೆಸಲಾಗುವುದರಿಂದ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರು ಅಗತ್ಯ ಕ್ರಮ ವಹಿಸಲು ಸೂಚಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
ಬೆಂಗಳೂರು.

**ಇವರಿಗೆ:**
ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳು - ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರೋಗ್ರಾಂ/ಬ್ರಾಂಚ್ ಅನ್ವಯ ಸಿ-03, ಸಿ-09, ಸಿ-15 ಮತ್ತು ಸಿ-20 ಪಠ್ಯಕ್ರಮಗಳ ವೇಳಾಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲು ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**
1. ಆಯುಕ್ತರ ಆಪ್ತಶಾಖೆ- ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶಕರು(ಎಸಿಎಂ)
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6. ರಿಜಿಸ್ಟ್ರಾರ್ (ಪರೀಕ್ಷೆ)
7. ಕಾರ್ಯದರ್ಶಿಗಳ ಆಪ್ತಶಾಖೆ.
8. ಉಪ ನಿರ್ದೇಶಕರು (ಪರೀಕ್ಷೆ)
9. ಗಣಕ ಕೇಂದ್ರ- ತಾಂತ್ರಿಕ ಪರೀಕ್ಷಾ ಮಂಡಳಿ, ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
10. ಕಛೇರಿ ಪ್ರತಿ.